# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **872 (1009)** |
| **ಮಾನ್ಯ ಸದಸ್ಯರ ಹೆಸರು** | **ಶ್ರೀ ಶಿವಕುಮಾರ್ ಕೆ. (ನಾಮನಿರ್ದೇಶನ ಹೊಂದಿದವರು)** |
| **ಉತ್ತರಿಸುವ ಸಚಿವರು** | **ಉನ್ನತ ಶಿಕ್ಷಣ ಸಚಿವರು** |
| **ಉತ್ತರಿಸಬೇಕಾದ ದಿನಾಂಕ** | **15.12.2025** |
| **ಪ್ರಶ್ನೆ** | **ಉತ್ತರ** |

**ಅ)** ಮೈಸೂರು, ಚಾಮರಾಜನಗರ, ಮಂಡ್ಯ ಮತ್ತು ಹಾಸನ ವಿಶ್ವವಿದ್ಯಾನಿಲಯಗಳ ವ್ಯಾಪ್ತಿಯಲ್ಲಿ ಬರುವ ಪದವಿ ಕಾಲೇಜುಗಳ ಸಂಖ್ಯೆ ಎಷ್ಟು?

ಮೈಸೂರು, ಚಾಮರಾಜನಗರ, ಮಂಡ್ಯ ಮತ್ತು ಹಾಸನ ವಿಶ್ವವಿದ್ಯಾನಿಲಯಗಳ ವ್ಯಾಪ್ತಿಯಲ್ಲಿ ಬರುವ ಪದವಿ ಕಾಲೇಜುಗಳ ಸಂಖ್ಯೆಗಳ ವಿವಿರ ಈ ಕೆಳಕಂಡಂತಿದೆ;

| ವಿಶ್ವವಿದ್ಯಾಲಯದ ಹೆಸರು | ಪದವಿ ಕಾಲೇಜುಗಳ ಸಂಖ್ಯೆ |
|---|---|
| ಮೈಸೂರು ವಿಶ್ವವಿದ್ಯಾಲಯ | 107 |
| ಚಾಮರಾಜನಗರ ವಿಶ್ವವಿದ್ಯಾಲಯ | 20 |
| ಹಾಸನ ವಿಶ್ವವಿದ್ಯಾಲಯ | 56 |
| ಮಂಡ್ಯ ವಿಶ್ವವಿದ್ಯಾಲಯ | 35 |

**ಆ)** 2023-24ನೇ ಸಾಲಿನಿಂದ 2025-26ನೇ ಸಾಲಿನವರೆಗೆ ವಿಶ್ವವಿದ್ಯಾನಿಲಯಗಳಲ್ಲಿ ಸ್ನಾತಕೋತ್ತರ ಪದವಿ ವಿಭಾಗಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು;

2023-24ನೇ ಸಾಲಿನಿಂದ 2025-26ನೇ ಸಾಲಿನವರೆಗೆ ವಿಶ್ವವಿದ್ಯಾನಿಲಯಗಳಲ್ಲಿ ಸ್ನಾತಕೋತ್ತರ ಪದವಿ ವಿಭಾಗಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳ ಮಾಹಿತಿ ಈ ಕೆಳಕಂಡಂತಿದೆ;

| ವಿಶ್ವವಿದ್ಯಾಲಯದ ಹೆಸರು | ವಿದ್ಯಾರ್ಥಿಗಳ ಸಂಖ್ಯೆ |
|---|---|
| ಮೈಸೂರು ವಿಶ್ವವಿದ್ಯಾಲಯ | 13470 |
| ಚಾಮರಾಜನಗರ ವಿಶ್ವವಿದ್ಯಾಲಯ | 1883 |
| ಹಾಸನ ವಿಶ್ವವಿದ್ಯಾಲಯ | 2640 |
| ಮಂಡ್ಯ ವಿಶ್ವವಿದ್ಯಾಲಯ | 2192 |

**ಇ)** ಈ ವಿಶ್ವವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಪದವಿ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ ಅಧ್ಯಾಪಕರ ಸಂಖ್ಯೆ ಎಷ್ಟು;

ಈ ವಿಶ್ವವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಪದವಿ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ ಅಧ್ಯಾಪಕರ ವಿವರ ಈ ಕೆಳಕಂಡಂತಿದೆ;

| ವಿಶ್ವವಿದ್ಯಾಲಯದ ಹೆಸರು | ಖಾಯಂ ಅಧ್ಯಾಪಕರ ಸಂಖ್ಯೆ |
|---|---|
| ಮೈಸೂರು ವಿಶ್ವವಿದ್ಯಾಲಯ | 95 |
| ಚಾಮರಾಜನಗರ ವಿಶ್ವವಿದ್ಯಾಲಯ | - |
| ಹಾಸನ ವಿಶ್ವವಿದ್ಯಾಲಯ | 11 |
| ಮಂಡ್ಯ ವಿಶ್ವವಿದ್ಯಾಲಯ | - |

| | | |
|---|---|---|
| ಈ) | 2023-24ನೇ ಸಾಲಿನಿಂದ 2025-26ನೇ ಸಾಲಿನವರೆಗೆ ರಾಜ್ಯ ಸರ್ಕಾರ ಯುಜಿಸಿ (ಕೇಂದ್ರ ಸರ್ಕಾರ) ನೀಡಿರುವ ಅನುದಾನದ ಮೊತ್ತ ಎಷ್ಟು; ಸದರಿ ವಿಶ್ವವಿದ್ಯಾಲಯಗಳಲ್ಲಿ ಗುಣಾತ್ಮಕ ಶಿಕ್ಷಣ ನೀಡಲು ವಿಶ್ವವಿದ್ಯಾಲಯಗಳು ಹಾಗೂ ಸರ್ಕಾರ ರೂಪಿಸಿರುವ ಯೋಜನೆಗಳೇನು? | ಈ ವಿಶ್ವವಿದ್ಯಾಲಯಗಳಿಗೆ ವೇತನ, ಪಿಂಚಣಿ ಅಭಿವೃದ್ಧಿ/ಪ್ರೋತ್ಸಾಹ ಮತ್ತು ಎಸ್‌ಸಿಪಿ-ಟಿಎಸ್‌ಪಿ ಯೋಜನೆಗಳಡಿ 2023-24ನೇ ಸಾಲಿನಿಂದ 2025-26ನೇ ಸಾಲಿನವರೆಗೆ ರಾಜ್ಯ ಸರ್ಕಾರ ಯುಜಿಸಿ (ಕೇಂದ್ರ ಸರ್ಕಾರ) ನೀಡಿರುವ ಅನುದಾನದ ವಿವರ ಈ ಕೆಳಕಂಡಂತಿದೆ; |

**ರಾಜ್ಯ ಸರ್ಕಾರ**

**(ರೂ. ಲಕ್ಷಗಳಲ್ಲಿ)**

| ವಿಶ್ವವಿದ್ಯಾಲಯದ ಹೆಸರು | 2023-24 | 2024-25 | 2025-26 |
|---|---|---|---|
| ಮೈಸೂರು ವಿವಿ | 17,154.22 | 17672.60 | 17774.12 |
| ಚಾಮರಾಜನಗರ ವಿವಿ | 100.00 | 43.42 | 106.40 |
| ಹಾಸನ ವಿವಿ | 100.00 | 57.25 | 48.40 |
| ಮಂಡ್ಯ ವಿವಿ | 43.00 | 45.95 | 68.43 |

**ಕೇಂದ್ರ ಸರ್ಕಾರ**

**(ರೂ. ಲಕ್ಷಗಳಲ್ಲಿ)**

| ವಿಶ್ವವಿದ್ಯಾಲಯದ ಹೆಸರು | 2023-24 | 2024-25 | 2025-26 |
|---|---|---|---|
| ಮೈಸೂರು ವಿವಿ | 1126.16 | 970.76 | 373.14 |
| ಚಾಮರಾಜನಗರ ವಿವಿ | - | - | - |
| ಹಾಸನ ವಿವಿ | - | - | - |
| ಮಂಡ್ಯ ವಿವಿ | - | - | - |

ಮೈಸೂರು, ಚಾಮರಾಜನಗರ, ಹಾಸನ ಮತ್ತು ಮಂಡ್ಯ ವಿಶ್ವವಿದ್ಯಾಲಯಗಳನ್ನು ಒಳಗೊಂಡಂತೆ ರಾಜ್ಯದ ಎಲ್ಲಾ ಸಾರ್ವಜನಿಕ ವಿಶ್ವವಿದ್ಯಾಗಳು ಸಂಶೋಧನೆ, ಪಠ್ಯಕ್ರಮ, ಉದ್ಯೋಗಾವಕಾಶ ಮತ್ತು ಡಿಜಿಟಲ್ ಕಲಿಕೆಗಳನ್ನು ಸುಧಾರಿಸಿ ಎಲ್ಲಾ ಪ್ರದೇಶಗಳು ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗಗಳ ಸಮುದಾಯಗಳಿಗೆ ಶಿಕ್ಷಣವನ್ನು ತಲುಪುವಂತೆ ಮಾಡಲು ಸರ್ಕಾರವು ಹಲವು ಯೋಜನೆಗಳನ್ನು ಅನುಷ್ಠಾನಗೊಳಿಸಿದ್ದು, ಮಾಹಿತಿಯನ್ನು **ಅನುಬಂಧದಲ್ಲಿರಿಸಿದೆ.**

ಸಂಖ್ಯೆ: ಇಡಿ 142 ಯುಎಂವಿ 2025

(~~ಡಾ.~~ ಎಂ.ಸಿ. ಸುಧಾಕರ್)
ಉನ್ನತ ಶಿಕ್ಷಣ ಸಚಿವರು

# ಅನುಬಂಧ

1. ಭಾರತ ಸರ್ಕಾರದ ರೂಸಾ ಯೋಜನೆಯಡಿಯಲ್ಲಿ ಹೊಸದಾಗಿ 02 ವಸತಿಸಹಿತ ಮಾದರಿ ಕಾಲೇಜುಗಳನ್ನು ತೆರೆಯಲಾಗಿದೆ ಮತ್ತು 05 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳನ್ನು ವಸತಿಸಹಿತ ಮಾದರಿ ಕಾಲೇಜುಗಳನ್ನಾಗಿ ಉನ್ನತೀಕರಿಸಲಾಗಿದೆ.
2. ರಾಜ್ಯದ SCP/TSP ಹಾಗೂ KKRDB ಅನುದಾನದಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶವನ್ನು ಒಳಗೊಂಡಂತೆ ಹೊಸದಾಗಿ 09 ವಸತಿಸಹಿತ ಮಾದರಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳನ್ನು ತೆರೆಯಲಾಗಿದೆ.
3. KKRDB ಅನುದಾನದಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶದ ವಿಶ್ವವಿದ್ಯಾಲಯಗಳನ್ನು ಉನ್ನತೀಕರಿಸಲು ಕ್ರಮಕೈಗೊಳ್ಳಲಾಗಿದೆ.
4. ಬೀದರ್, ತಳಕಲ್, ಗಂಗಾವತಿ ಮತ್ತು ರಾಯಚೂರು-ಜಿಲ್ಲೆಗಳಲ್ಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳನ್ನು ತೆರೆಯಲಾಗಿದೆ.
5. ಕೌಶಲ್ಯ ಹಾಗೂ ಉದ್ಯೋಗಾಭಿವೃದ್ಧಿಗೆ ಒತ್ತು ನೀಡಿ ಪ್ರವೇಶಾತಿಯನ್ನು ಹೆಚ್ಚಿಸುವ ಸಲುವಾಗಿ AEDP (Apprenticeship Embedded Degree Programme ಕೋರ್ಸ್‌ಗಳನ್ನು ಪ್ರಾರಂಭಿಸಲಾಗಿದೆ.
6. ಕಲಿಕೆ ಜೊತೆ ಕೌಶಲ್ಯಾಧಾರಿತ ಕೋರ್ಸ್‌ಗಳನ್ನು KSDC ಸಹಯೋಗದಲ್ಲಿ ಪ್ರಾರಂಭಿಸಲಾಗಿದೆ.
7. ಕೇಂದ್ರ ಸರ್ಕಾರದ ಮಾರ್ಗಸೂಚಿ ಹಾಗೂ ರಾಜ್ಯ ಸರ್ಕಾರದ ನೀತಿಯಂತೆ ರಾಜ್ಯದಲ್ಲಿ ಕಲಿಕೆ ಮತ್ತು ಕೌಶಲ್ಯ, ಕಲಿಕೆ ಜೊತೆ ಕೌಶಲ್ಯ, ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆ, ಅಮೃತ ಮುನ್ನಡೆ ಹಾಗೂ Karnataka German Multi Skills Development Centre (KGMSD) ಅಡಿಯಲ್ಲಿ ಬೆಂಗಳೂರು, ಕಲಬುರಗಿ, ಬೆಳಗಾವಿ, ಮಂಗಳೂರು, ಹುಬ್ಬಳ್ಳಿ, ಮೈಸೂರು, ಗೌರಿಬಿದನೂರು, ಕಾರ್ಕಳ ಇಲ್ಲಿ ಕಲಿಕಾ ಕೇಂದ್ರಗಳನ್ನು ಸ್ಥಾಪಿಸಲಾಗಿರುತ್ತದೆ.
8. ರಾಜ್ಯದಲ್ಲಿ ಉದ್ಯೋಗಧಾರಿತ ಮಾರುಕಟ್ಟೆಯ ಬೇಡಿಕೆಗೆ ಅನುಗುಣವಾಗಿ 226 ಸರ್ಕಾರಿ ಕಾಲೇಜುಗಳಲ್ಲಿ ಹೊಸ ಕೋರ್ಸ್ ಮತ್ತು ಕಾಂಬಿನೇಷನ್‌ಗಳನ್ನು ತೆರೆಯಲಾಗಿದೆ ಹಾಗೂ 15 ವಿವಿಧ ಉದ್ಯೋಗಾಧಾರಿತ ಕೋರ್ಸ್‌ಗಳನ್ನು ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ತೆರೆಯಲಾಗಿದೆ.
9. ಉದ್ಯೋಗ ಮತ್ತು ಉದ್ಯೋಗಾಧಾರಿತ ಶಿಕ್ಷಣವನ್ನು ನೀಡಲು ಅಜೀಪ್ರೇಮಂಜಿ, ಎಚ್‌ಪಿ, ಟೊಯೊಟೊ ಮುಂತಾದ ಕೈಗಾರಿಕೋದ್ಯಮಗಳೊಂದಿಗೆ MoU ಮೂಲಕ ಒಡಂಬಡಿಕೆ ಮಾಡಿಕೊಂಡು ಶಿಕ್ಷಣವನ್ನು ನೀಡಲಾಗುತ್ತಿದೆ.
10. ಉದ್ಯೋಗ ಸೃಷ್ಠಿಸುವಂತಹ ಬಿಸಿಎ ಮತ್ತು ಬಿಬಿಎ ಕೋರ್ಸ್‌ಗಳನ್ನು ಸರ್ಕಾರಿ ಪದವಿ ಕಾಲೇಜುಗಳಲ್ಲಿ ಪ್ರಾರಂಭಿಸಲಾಗಿದೆ.
11. ರಾಜ್ಯದ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ವಿವಿಧ ಪದವಿ ಕೋರ್ಸ್‌ಗಳಿಗೆ ವಿದ್ಯಾರ್ಥಿಗಳ ಬೇಡಿಕೆಗೆ ಅನುಗುಣವಾಗಿ ಪ್ರವೇಶಾತಿಯನ್ನು ಮಾಡಿಕೊಳ್ಳಲು ಸರ್ಕಾರದ ಆದೇಶ ಸಂಖ್ಯೆ: ಇಡಿ 255 ಯುಎನ್‌ಇ 2020, ದಿನಾಂಕ: 29.10.2020ರನ್ವಯ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಿಗೆ ನಿರ್ದೇಶನ ನೀಡಲಾಗಿರುತ್ತದೆ.
12. ಹೆಣ್ಣು ಮಕ್ಕಳನ್ನು ಉನ್ನತ ಶಿಕ್ಷಣದಲ್ಲಿ ಉತ್ತೇಜಿಸಲು ಸರ್ಕಾರಿ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಕಾಲೇಜುಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿನಿಯರಿಗೆ ಶುಲ್ಕ ಮರು ಪಾವತಿ ಯೋಜನೆ ಜಾರಿಯಲ್ಲಿರುತ್ತದೆ.
13. ಸಮಾಜ ಕಲ್ಯಾಣ ಇಲಾಖೆಯ ಆದೇಶ ಸಂಖ್ಯೆ:ಸಕಇ 83 ಪಕವಿ 2013, ದಿನಾಂಕ: 27.06.2013ರಲ್ಲಿ ರಾಜ್ಯ ವಿಶ್ವವಿದ್ಯಾಲಯಗಳಲ್ಲಿ / ಶಿಕ್ಷಣ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿ / ಪಂಗಡದ ವಿದ್ಯಾರ್ಥಿಗಳಿಗೆ ಪ್ರವೇಶಾತಿ ಸಮಯದಲ್ಲಿ ಶುಲ್ಕ ಪಾವತಿಸುವಂತೆ ಒತ್ತಾಯಿಸದಿರುವ ಬಗ್ಗೆ ಆದೇಶವನ್ನು ಹೊರಡಿಸಲಾಗಿರುತ್ತದೆ.
14. ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಬೋಧನಾ ಹಾಗೂ ಪ್ರಯೋಗಾಲಯ ಶುಲ್ಕದಿಂದ ವಿನಾಯಿತಿ ನೀಡಲಾಗಿರುತ್ತದೆ.

15.ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಆದೇಶ ಸಂಖ್ಯೆ: ಹಿಂವಇ 397 ಬಿಎಂಎಸ್ 2013, ದಿನಾಂಕ: 05.09.2013ರನ್ವಯ ಹಿಂದುಳಿದ ವರ್ಗಗಳಲ್ಲಿನ ವಿದ್ಯಾರ್ಥಿಗಳಿಗೆ ಹೆಚ್ಚಿನ ಅನುಕೂಲಗಳನ್ನು ಕಲ್ಪಿಸುವ ಹಿತದೃಷ್ಟಿಯಿಂದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿವಿಧ ಯೋಜನೆ / ಕಾರ್ಯಕ್ರಮಗಳಿಗೆ ಆದಾಯ ಮಿತಿಯನ್ನು ಪರಿಷ್ಕರಿಸಿರುತ್ತದೆ.

16.ಸರ್ಕಾರಿ ಪ್ರಥಮ ದರ್ಜೆಯ ಕಾಲೇಜುಗಳ ವಿದ್ಯಾರ್ಥಿಗಳಿಗೆ ಪದವಿ ನಂತರದ ಉದ್ಯೋಗಾವಕಾಶಗಳ ಕುರಿತು ಮಾಹಿತಿ ನೀಡುತ್ತಿದ್ದು ಉದ್ಯೋಗ ಮೇಳಗಳ ಆಯೋಜನೆ, ಕೌಶಲ್ಯ ತರಬೇತಿ, ಗ್ರಂಥಾಲಯ ಸೌಲಭ್ಯ, ಪ್ರಯೋಗಾಲಯ ಸೌಲಭ್ಯ, smart class, N.C.C./N.S.S,ಕ್ರೀಡಾ ಚಟುವಟಿಕೆಗಳಿಗೆ ತರಬೇತಿ ನೀಡಲಾಗುತ್ತದೆ.

17.ಆರ್ಥಿಕವಾಗಿ ಹಿಂದುಳಿದ ಕುಟುಂಬದ ವಿದ್ಯಾರ್ಥಿಗಳ ಉನ್ನತ ಶಿಕ್ಷಣದ ಪ್ರೋತ್ಸಾಹಕ್ಕಾಗಿ ರಾಜೀವ್ ಗಾಂಧಿ ಸಾಲ ರೂಪದ ವಿದ್ಯಾರ್ಥಿ ವೇತನ ಯೋಜನೆಯಡಿ ವಿದ್ಯಾರ್ಥಿಗಳು ಬ್ಯಾಂಕುಗಳಲ್ಲಿ ಪಡೆಯುವ ಸಾಲಕ್ಕೆ ಶೈಕ್ಷಣಿಕ ಅವಧಿಗೆ ಇಲಾಖೆಯಿಂದ ಬ್ಯಾಂಕುಗಳಿಗೆ ಬಡ್ಡಿ ಸಬ್ಸಿಡಿ ನೀಡಲಾಗುತ್ತಿದೆ.

18.ಇಲಾಖಾ ವ್ಯಾಪ್ತಿಯಡಿ ಬರುವ ಸರ್ಕಾರಿ ಮತ್ತು ಅನುದಾನಿತ ಪದವಿ ಮತ್ತು ಸ್ನಾತಕೋತ್ತರ ಪದವಿ ಕಾಲೇಜುಗಳಿಗೆ (ಅನುದಾನಿತ ಕೋರ್ಸುಗಳಿಗೆ ಮಾತ್ರ) ಪ್ರವೇಶ ಪಡೆದು ವಿದ್ಯಾಭ್ಯಾಸ ಮಾಡುವ ಆರ್ಥಿಕವಾಗಿ ಹಿಂದುಳಿದ ಕುಟುಂಬದಿಂದ ಬಂದ ವಿದ್ಯಾರ್ಥಿಗಳ ಉನ್ನತ ಶಿಕ್ಷಣದ ಪ್ರೋತ್ಸಾಹಕ್ಕಾಗಿ ರಾಜ್ಯ ಸರ್ಕಾರವು ರಾಜೀವ್ ಗಾಂಧಿ ಸಾಲ ರೂಪದ ವಿದ್ಯಾರ್ಥಿ ವೇತನದ ಬಡ್ಡಿ ಸಬ್ಸಿಡಿ ಯೋಜನೆಯನ್ನು ಜಾರಿಗೆ ತರಲಾಗಿದೆ.

19.ವಿದ್ಯಾರ್ಥಿಗಳು ಯಾವುದೇ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಶೈಕ್ಷಣಿ ಸಾಲ ಪಡೆದಿದ್ದಲ್ಲಿ ಸದರಿ ವಿದ್ಯಾರ್ಥಿಗಳು ಪಾವತಿಸಬೇಕಾದ ಬಡ್ಡಿ ಮೊತ್ತವನ್ನು ಇಲಾಖೆಯಿಂದ ಬ್ಯಾಂಕುಗಳಿಗೆ ಪಾವತಿಸಲಾಗುವುದು.

20.ದ್ವಿತಿಯ ಪಿ.ಯು.ಸಿ. ಉತ್ತೀರ್ಣಗೊಂಡು ವಿವಿಧ ಪದವಿ ತರಗತಿಗೆ ಪ್ರವೇಶ ಪಡೆಯುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸಂಚಿ ಹೊನ್ನಮ್ಮ ಮತ್ತು ಸರ್.ಸಿ.ವಿ.ರಾಮನ್ ವಿದ್ಯಾರ್ಥಿ ವೇತನದ ಮಂಜೂರಾತಿ ಯೋಜನೆಯು ಜಾರಿಯಲ್ಲಿರುತ್ತದೆ.

21.ಹೆಣ್ಣು ಮಕ್ಕಳ ಪ್ರವೇಶಾತಿಯನ್ನು ಉತ್ತೇಜಿಸಲು ವಿದ್ಯಾರ್ಥಿ ವೇತನ, ಉಚಿತ ಶುಲ್ಕದ ಜೊತೆಗೆ ವಾರ್ಷಿಕ ರೂ. 30,000/- ಗಳನ್ನು ರಾಜ್ಯದ 37500 ವಿದ್ಯಾರ್ಥಿನಿಯರಿಗೆ ಅಜೀಂ ಪ್ರೇಂಜಿ ಫೌಂಡೇಷನ್ ಒಡಗೂಡಿ "ದೀಪಿಕ" ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ.

22.ಸರ್ಕಾರದ ಆದೇಶ ಸಂಖ್ಯೆ: ಇಡಿ 102 ಯುಎನ್ಇ 2009, ದಿನಾಂಕ: 04.06.2009ರಲ್ಲಿ ಯಾವುದೇ ಒಬ್ಬ ವಿದ್ಯಾರ್ಥಿಯು ಪ್ರವೇಶಾತಿ ಕೋರಿ ಬಂದಲ್ಲಿ ಆತನಿಗೆ / ಆಕೆಗೆ ಪ್ರವೇಶಾತಿಯನ್ನು ನಿರಾಕರಿಸುವಂತಿಲ್ಲವೆಂದು ಆದೇಶ ಹೊರಡಿಸಲಾಗಿದ್ದು, ಎಲ್ಲಾ ವರ್ಗಗಳ ವಿದ್ಯಾರ್ಥಿಗಳಿಗೂ ಪ್ರವೇಶಾತಿಯನ್ನು ನೀಡಲಾಗುತ್ತಿದೆ.